**ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ. ದ. ನ್ಯಾ. ದಂಡಾಧಿಕಾರಿಗಳ ನ್ಯಾಯಾಲಯ, ಗೋಕಾಕ**

**ಸಿ.ಸಿ. ನಂ. 3722/2023**

**ಪಿರ್ಯಾದುದಾರರುಃ** ಶ್ರೀ ಹಣಮಂತ ರಾಮಚಂದ್ರ ಪಾಟೀಲ,
45 ವರ್ಷ, ವೃತಿಃ ಒಕ್ಕಲುತನ,
ಸಾಃ ನಲ್ಲಾನಟ್ಟಿ, ತಾಃ ಗೋಕಾಕ, ಜಿ.ಬೆಳಗಾವಿ,

**- ವಿರುದ್ಧ -**

**ಆರೋಪಿ** ಶ್ರೀ ರೇವಣ್ಣ ಲಕ್ಷ್ಮಪ್ಪ ಹಂಡಿಬಾಗ,
52 ವರ್ಷ, ವೃತಿಃ ಒಕ್ಕಲುತನ,
ಸಾಃ ಹಳೆ ಯರಗುದ್ರಿ, ತಾಃ ಮೂಡಲಗಿ, ಜಿ.ಬೆಳಗಾವಿ

**ಆಪಾದನೆ**

**ಶ್ರೀ ರಾಜೀವ ಗೋಳಸಾರ, ಬಿ.ಎ., ಎಲ್.ಎಲ್.ಎಂ., ಪ್ರಧಾನ ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂಡಾಧಿಕಾರಿ, ಗೋಕಾಕ,** ಆದ ನಾನು, ಆರೋಪಿಯಾದ ನಿಮ್ಮ ಮೇಲೆ ಈ ಕೆಳಕಂಡಂತೆ ಆಪಾದನೆ ಮಾಡುತ್ತಿದ್ದೇನೆಃ

ಪಿರ್ಯಾದಿದಾರರು ಮತ್ತು ಆರೋಪಿಯಾದ ನೀವು ಸುಮಾರು 02 ವರ್ಷಗಳಿಂದ ಒಳ್ಳೆಯ ಪರಿಚಯಸ್ಥರಿರುತ್ತೀರಿ, ಹೀಗಿರುವಾಗ ಆರೋಪಿಯಾದ ನೀವು ಸುಮಾರು 01 ವರ್ಷದ ಹಿಂದೆ ನಿಮ್ಮ ಮನೆತನದ ಅಡಚಣೆ ಇರುವ ಸಲುವಾಗಿ ಪಿರ್ಯಾದುದಾರರ ಕಡೆಯಿಂದ ರೂ.5,00,000/-ಗಳ ಸಾಲ ಕೇಳಿದ್ದು, ಅದಕ್ಕೆ ಪಿರ್ಯಾದುದಾರರು ಒಂದು ವರ್ಷದ ಹಿಂದೆಯೇ ರೂ.5,00,000/-ಗಳನ್ನು ಆರೋಪಿಯಾದ ನಿಮಗೆ ನೀಡಿರುತ್ತಾರೆ. ನೀವು ಸದರಿ ಹಣವನ್ನು ಒಂದು ವರ್ಷದ ನಂತರ ಮರಳಿ ಕೊಡುತ್ತೇನೆಂದು ತಿಳಿಸಿರುತ್ತಿರಿ.

ನಂತರ ಪಿರ್ಯಾದುದಾರರು ಆರೋಪಿಯಾದ ನಿಮಗೆ 2023 ನೇ ಸಾಲಿನ ಜೂನ್ ತಿಂಗಳ ಮೊದಲನೇ ವಾರದಲ್ಲಿ ಸದರಿ ಸಾಲದ ಹಣವನ್ನು ಮರು ಪಾವತಿ ಮಾಡುವಂತೆ ಕೇಳಿದಾಗ, ಆರೋಪಿಯಾದ ನೀವು ದಿಃ07-06-2023 ರಂದು ನಿಮ್ಮ ಯೂನಿಯನ್ ಬ್ಯಾಂಕ್ ಅವರಾದಿ ಶಾಖೆ ಇಲ್ಲಿಗೆ ಸೇರಿದ ಚೆಕ್ ನಂ.003656 ಮತ್ತು 003657 ನೇದ್ದನ್ನು ತಲಾ ರೂ.2,50,000/- ಗಳ ಎರಡು ಚೆಕ್ಕುಗಳನ್ನು ಪಿರ್ಯಾದುದಾರರಿಗೆ ನೀಡಿರುತ್ತಿರಿ.

ಆರೋಪಿಯಾದ ನೀವು ನೀಡಿದ ಚೆಕ್ಕನ್ನು ಪಿರ್ಯಾದುದಾರರು ತಮ್ಮ ಖಾತೆಯಿರುವ ಎಚ್ ಡಿ ಎಫ್ ಸಿ ಬ್ಯಾಂಕ್ , ಗೋಕಾಕ ಶಾಖೆ ಇಲ್ಲಿಗೆ ನಗದೀಕರಣಕ್ಕೆ ಹಾಜರುಪಡಿಸಿದಾಗ, ಆರೋಪಿಯಾದ

ನಿಮ್ಮ ಖಾತೆಯಲ್ಲಿ " (DRAWER SIGNATURE DIFFERS) ಎಂಬ ಹಿಂಬರಹ ಹಾಗೂ ಮೆಮೋದೊಂದಿಗೆ ದಿನಾಂಕ 08-06-2023 ರಂದು ಸದರಿ ಚೆಕ್ ಅಮಾನ್ಯಗೊಂಡಿರುತ್ತದೆ.

ನಂತರ ಫಿರ್ಯಾದುದಾರರು ಆರೋಪಿಯಾದ ನೀವು ನೀಡಿದ ಚೆಕ್ಕು ಅಮಾನ್ಯಗೊಂಡ ಬಗ್ಗೆ ತಮ್ಮ ವಕೀಲರ ಮುಖಾಂತರ ದಿನಾಂಕ 14-06-2023 ರಂದು ತಿಳುವಳಿಕೆ ಪತ್ರವನ್ನು ಆರೋಪಿಯಾದ ನಿಮಗೆ ನೋಂದಾಯಿತ ಅಂಚೆ ಮೂಲಕ ಕಳುಹಿಸಿದ್ದರೂ, ಸದರಿ ನೋಟಿಸು ದಿನಾಂಕ 16-06-2023 ರಂದು ಜಾರಿಯಾಗಿದ್ದರು ಸಹ ಆರೋಪಿಯಾದ ನೀವು ನಿಗದಿತ ಸಮಯದಲ್ಲಿ ಚೆಕ್ಕಿನ ಹಣವನ್ನು ಮರುಸಂದಾಯ ಮಾಡದೆ ಇರುವ ಕಾರಣ ನೀವು ವರ್ಗಾವಣೀಯ ಲಿಖಿತಗಳ ಅಧಿನಿಯಮದ ಕಲಂ.138 ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿರುತ್ತದೆ.

**ಆರೋಪಿಯ ಹೇಳಿಕೆ**

ಪ್ರಶ್ನೆ ನಂ.1. ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿಸಿಕೊಂಡಿರಾ ? ತಿಳಿಯಿತೇ ?

ಉತ್ತರಃ

ಪ್ರಶ್ನೆ ನಂ.2. ಸದರಿ ಆಪಾದನೆಯನ್ನು ಒಪ್ಪಿಕೊಳ್ಳುವಿರಾ ? ಅಥವಾ ವಿಚಾರಣೆಯಾಗಬೇಕಾ ?

ಉತ್ತರಃ

ಮೇಲಿನ ಆಪಾದನೆಯನ್ನು ಆರೋಪಿಗೆ ಕನ್ನಡ ಭಾಷೆಯಲ್ಲಿ ಓದಿ ಹೇಳಿ, ಆರೋಪಿಯು ಕೊಟ್ಟ ಉತ್ತರವು ಸಂಪೂರ್ಣ ಹಾಗೂ ಸರಿಯಾದ ಮಾಹಿತಿಯನ್ನೊಳಗೊಂಡಿದೆ ಎಂದು ಈ ದಿನ ಅಂದರೆ ದಿನಾಂಕ **20**-10-2023 ರಂದು ತೆರೆದ ನ್ಯಾಯಾಲಯದಲ್ಲಿ ದೃಡೀಕರಿಸುತ್ತೇನೆ.

**(ರಾಜೀವ ಗೋಳಸಾರ)**
**ಪ್ರಧಾನ ಪ್ರ.ದ.ನ್ಯಾ. ದಂ, ಗೋಕಾಕ.**